**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ 72ರಡಿ "ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಪ್ರಧಾನ ಕಛೇರಿಯಲ್ಲಿಯೇ ನೇಮಕಗೊಂಡು ಅದೇ ಕಛೇರಿಯಲ್ಲಿ ಪದೋನ್ನತಿ ಹೊಂದಿ ಸುಮಾರು 20-25 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳ ಸೇವೆ ಅನಿವಾರ್ಯವೆಂಬಂತೆ ತಪ್ಪು ವರದಿಗಳನ್ನು ಸರ್ಕಾರಕ್ಕೆ ಮತ್ತು ಸದನಕ್ಕೆ ಸಲ್ಲಿಸಿ ಮುಂದುವರೆಸಲು ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳದೇ ಇರುವ ಬಗ್ಗೆ ಸಂಘ-ಸಂಸ್ಥೆ ಸಾರ್ವಜನಿಕರು ದೂರು ನೀಡುತ್ತಿದ್ದರೂ ಇದುವರೆಗೂ ಕ್ರಮ ಜರುಗಿಸಿರುವುದಿಲ್ಲ. ಈ ಬಗ್ಗೆ ತಪ್ಪು ಮಾಹಿತಿ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ" ಕೋರಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ:-**

ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ನಿರ್ದೇಶನಾಲಯಕ್ಕೆ ಒಟ್ಟು 51 ಹುದ್ದೆಗಳು ಮಂಜೂರಾಗಿದ್ದು, ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಗಳ ಪದನಾಮ | ಸಮೂಹ | ಮಂಜೂರು | ಭರ್ತಿ | ಖಾಲಿ |
|---|---|---|---|---|---|
| 1 | ನಿರ್ದೇಶಕರು | ಗ್ರೂಪ್ ಎ | 01 | 01 | 00 |
| 2 | ಜಂಟಿ ನಿರ್ದೇಶಕರು | | 01 | 01 | 00 |
| 3 | ಉಪ ನಿರ್ದೇಶಕರು | | 01 | 01 | 00 |
| 4 | ಸಹಾಯಕ ನಿರ್ದೇಶಕರು | | 01 | 00 | 01 |
| **ಒಟ್ಟು** | | | **04** | **03** | **01** |
| 5 | ಶಾಖಾಧಿಕಾರಿಗಳು | ಗ್ರೂಪ್ ಬಿ | 01 | 00 | 01 |
| 6 | ಕಛೇರಿ ವ್ಯವಸ್ಥಾಪಕರು | | 01 | 00 | 01 |
| **ಒಟ್ಟು** | | | **02** | **00** | **02** |
| 8 | ಲೆಕ್ಕ ಅಧೀಕ್ಷಕರು | ಗ್ರೂಪ್ ಸಿ. | 01 | 01 | - |
| 9 | ಅಪತ್ರಾಂಕಿತ ಅಧೀಕ್ಷಕರು | | 05 | 03 | 02 |
| 10 | ಪ್ರ.ದ.ಸ | | 12 | 06 | 06 |
| 11 | ಶೀಘ್ರ ಲಿಪಿಗಾರರು | | 02 | 01 | 01 |
| 12 | ದ್ವಿ.ದ.ಸ | | 10 | 02 | 08 |
| 13 | ಬೆರಳಚ್ಚುಗಾರರು | ಗ್ರೂಪ್ ಸಿ | 04 | 01 | 03 |
| 14 | ವಾಹನ ಚಾಲಕರು | | 04 | 01 | 03 |
| **ಒಟ್ಟು** | | | **38** | **15** | **23** |
| 15 | ಗ್ರೂಪ್ ಡಿ | ಗ್ರೂಪ್ ಡಿ | **07** | **00** | **07** |
| | | **ಒಟ್ಟು** | **51** | **18** | **33** |

ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಪ್ರಧಾನ ಕಛೇರಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ನೇಮಕಗೊಂಡಾಗಿನಿಂದ ಪ್ರಧಾನ ಕಛೇರಿಯಲ್ಲಿಯೇ ಮುಂಬಡ್ತಿ ಪಡೆದು ವರ್ಗಾವಣೆಯಾಗದೇ ಮುಂದುವರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನೇಮಕಗೊಂಡಾಗಿನಿಂದ ನಿರ್ದೇಶನಾಲಯದಲ್ಲಿಯೇ ಮುಂಬಡ್ತಿ ಪಡೆದು ವರ್ಗಾವಣೆಯಾಗದೇ ಮುಂದುವರೆಯುತ್ತಿರುವ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಹುದ್ದೆಗಳ ಪದನಾಮ | ಮುಂಬಡ್ತಿ ಹೊಂದಿದ ಹುದ್ದೆಯ ಪದನಾಮ | ಸಿಬ್ಬಂದಿಗಳ ಸಂಖ್ಯೆ |
|---|---|---|---|
| 01 | ಗ್ರೂಪ್ ಡಿ | ದ್ವಿತೀಯ ದರ್ಜೆ ಸಹಾಯಕರು | 01 |
| 02 | ಪ್ರಥಮ ದರ್ಜೆ ಸಹಾಯಕರು | ಅಪತ್ರಾಂಕಿತ ಅಧೀಕ್ಷಕರು | 02 |
| | | **ಒಟ್ಟು** | **03** |

ನಿರ್ದೇಶನಾಲಯದಲ್ಲಿ ಸಿಬ್ಬಂದಿಗಳ ಕೊರತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮುಂಬಡ್ತಿ ನೀಡುವಾಗ ಕಛೇರಿಯ ಕೆಲಸಗಳ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿರ್ದೇಶನಾಲಯದಲ್ಲಿ ಮುಂಬಡ್ತಿ ಹುದ್ದೆಗಳು ಖಾಲಿ ಇದ್ದುದರಿಂದ ನಿಯಮಾನುಸಾರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಮುಂಬಡ್ತಿ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿ ಮುಂಬಡ್ತಿ ನೀಡಲಾಗಿರುತ್ತದೆ.

ಸಂಘ-ಸಂಸ್ಥೆಗಳ, ಸಾರ್ವಜನಿಕರ ದೂರುಗಳಿರುವ ಬಗ್ಗೆ ಪರಿಶೀಲಿಸಿ, ಅಗತ್ಯಾನುಸಾರ ಸಾರ್ವತ್ರಿಕ ವರ್ಗಾವಣೆಯಲ್ಲಿ ಅಗತ್ಯ ಕ್ರಮವಹಿಸಲು ಪರಿಶೀಲಿಸಲಾಗುತ್ತದೆ.

**ಸಂಖ್ಯೆ: ಮಮಇ 467 ಎಸ್‌ಜೆಡಿ 2023.**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.